ಋಣ ಮುಗಿಯಿತು ಎಂದು ಕಾಣುತ್ತದೆ. ಅಲ್ಲದಿದ್ದರೂ ಈ ನಾರಣಪ್ಪನ ಹತ್ರ ಬದುಕುವುದು ಕಷ್ಟವೇ. ಅವಳನ್ನು ಶುದ್ಧಿಮಾಡಿ ಮತ್ತೊಂದು ಮದುವೆ ಮಾಡಿದರೆ ಆಯ್ತು. ದಮಯಂತಿಗೆ ಪುನರ್ ಸ್ವಯಂವರ ಆಗಲಿಲ್ಲವೋ – ಹಾಗೆ ಅಷ್ಟೆ'' ತನಗೆ ಯಾವುದು ಅನುಕೂಲವಾಗುತ್ತದೆಯೋ ಅದನ್ನು ಸಾರವತ್ತಾಗಿ ಮಂಡಿಸುವ ಅವರು ಮನುಸ್ಮೃತಿಯನ್ನು ಬಾಯಿಪಾಠ ಮಾಡಿದ್ದಾರೆ ಎಂದು ಪ್ರಚಾರವಂತೂ ಇದ್ದೇ ಇದೆ. ಸಮಯಕ್ಕೆ ಯಾವ ಶ್ಲೋಕವು ಹೊಳೆಯುತ್ತದೆಯೋ ಅದನ್ನು ಉದುರಿಸುತ್ತಾರೆ. ಕೊನೆಗೆ, "ಎಂದು ಶಾಸ್ತ್ರಕಾರರು" ಹೇಳುತ್ತಾರೆ ಎಂದು ಮುಗಿಸುತ್ತಾರೆ. ಇದನ್ನೇ ಯೋಚನೆ ಮಾಡುತ್ತಾ ಹೊರಗೆ ಬೀಳುವ ಮಳೆಯನ್ನು ನೋಡುತ್ತಾ ನಾರಣಪ್ಪ ಕುಳಿತಿದ್ದ. ಆಗ ಬಂದಳು ಚಂದ್ರಿ. ಹೊರಗಿನ ಬಚ್ಚಲು ಮನೆಯಲ್ಲಿ ನಿಂತು ತನ್ನ ಸೆರಗನ್ನು ಹಿಂಡಿದಳು.

"ಒಳಗೆ ಬಾ" ಎಂದ ನಾರಣಪ್ಪ. "ನಮ್ಮಂತವರು ನಿಮ್ಮ ಮನೆಯ ಒಳಗೆ ಬರಬಾರದು'' ಎಂದವಳು ಮೈಗೆ ಅಂಟಿದ್ದ ಸೀರೆಯನ್ನು ಹಿಂಡಿದಳು. ಅವನಿಗೆ ಮತ್ತೆ ಮಿಂಚು. ಮತ್ತೆ ಗುಡುಗು ಕೇಳಿಸಿತು. ಮಿಂಚಿನಲ್ಲಿ ಅವಳ ಮೈ, ಅವಳ ಎದೆ ಕಾಣಿಸಿತು. ಮತ್ತೊಮ್ಮೆ 'ಬಾ' ಎಂದ. ಅವಳು ಸಂಕೋಚದಿಂದ ಬಂದಳು. ಅವಳ ಮೈಮಾಟವು ಅವನನ್ನು ನಡುಗಿಸಿತು. ತಟಕ್ಕನೆ ಅಪ್ಪಿಕೊಂಡ. ಕಳೆದು ಹೋದ ಹೆಣ್ಣುಜೀವವು ಈಗ ಸಿಕ್ಕಿತು ಎನ್ನುವ ಭಾವನೆಯಲ್ಲಿ ಅವಳ ದೇಹದಲ್ಲಿ ಎಲ್ಲವನ್ನೂ ಹುಡುಕಿದ. ಎಂದೋ ತನ್ನ ಪಾಲಿಗೆ ಇಲ್ಲವಾದ ಗಂಡನನ್ನು ಚಂದ್ರಿಯು ನಾರಣಪ್ಪನಲ್ಲಿ ಕಂಡಳು. ಗಂಡ ತನ್ನನ್ನು ಬಿಟ್ಟು ಹೋದದ್ದು ಯಾಕೆ ಎಂದು ಗೊತ್ತಿಲ್ಲ. ಆದರೆ, ಅವನೂ ಓಡಿಹೋದವನು. ಯಾವುದೋ ಸೆರಗು ಸಿಕ್ಕಿರುತ್ತದೆ ಎಂದು ತಿಳಿದವಳು. ಎಂದೂ ಅವನ ಬಗ್ಗೆ ಮತ್ತೆ ಯೋಚನೆ ಮಾಡಿದವಳಲ್ಲ. ಅವಳಿಗೆ ಬೇಕಾಗಿರದ ನೆನಪು ಅದು. ಆ ವಿಷಯದಲ್ಲಿ ಪಕ್ಕಾ ವಾಸ್ತವವಾದಿ. ಗಂಡ ಓಡಿ ಹೋದ ಮರುದಿನ ಸ್ವಲ್ಪ ಹುಡುಕಿದಳು – ಕಳೆದು ಹೋದ ಜಾನುವಾರನ್ನು ಹುಡುಕುವ ಹಾಗೆ. ನಾರಣಪ್ಪ ಅವಳ ಮೈಯನ್ನು ನಿಧಾನವಾಗಿ ಮುಟ್ಟಿದ. ತಲೆಯಿಂದ ಕಾಲ ಬುಡದವರೆಗೆ. ಸಂಜೆ ಎನ್ನುವುದು ಆಗ ಅವರನ್ನು ಕೂಡಿಸಿದ ಗಳಿಗೆಯೂ ಹೌದು. ಬೆಳಕು ಮತ್ತು ಕತ್ತಲೆಯ ಮಧ್ಯೆ. ತಾನು ಕತ್ತಲೆ. ಅವಳು ಬೆಳಕು ಎಂದು ಅನಿಸಿತು. ನಾರಣಪ್ಪ ಆ ಸನ್ನಿವೇಶದಲ್ಲಿಯೂ ಯೋಚನೆ ಮಾಡಿದ: ಖಂಡಿತಾ ಇದು ದಾಹವಲ್ಲ, ಇದರ ಆಚೆಗೆ ಮತ್ತೆ ಏನೋ ಇದೆ. ಮಲ್ಲಿಗೆಯ ಹೂ. ಮೆಲ್ಲನೆ ಮುಟ್ಟಬೇಕು. ಹಿಸುಕಬಾರದು. ಈ ಹೆಣ್ಣು ದೇಹದಲ್ಲಿ ಜೀವಶಕ್ತಿ ಇದೆ. ಮೆಲ್ಲನೆ ಅವಳ ಕಿವಿಯಲ್ಲಿ ಪಿಸುಗುಟ್ಟಿದ, "ಚಂದ್ರಿ" ಅದಕ್ಕೆ ಉತ್ತರ ಎನ್ನುವಂತೆ ಚಂದ್ರಿಯು ''ಒಡೆಯರೆ'' ಎನ್ನುತ್ತಾ ಅವನ ತೊಡೆಯಲ್ಲಿ ಮಲಗಿ ಅವನ ತೋಳನ್ನು ಸವರುತ್ತಾ ಅವನ ಎದೆಯನ್ನು ಮುಟ್ಟಿದಳು. ಅಲ್ಲಿಯೇ ಹುಡುಕಿದಳು – "ಒಡೆಯಾ, ನಾವು ಮಾಡುವುದು ಸರಿಯಾ?" ತನ್ನ ತೊಡೆಯಲ್ಲಿ ಮಲಗಿದ ಚಂದ್ರಿಯ ಮಾತುಗಳು ಅಸಹಜ ಎಂದು ಅನಿಸಲಿಲ್ಲ. "ಒಡೆಯರೆ ನಿಮ್ಮನ್ನು ನಿಮ್ಮ ಜಾತಿಯವರು ಬಿಟ್ಟಾರಾ?"

ನಾರಣಪ್ಪ ಹೇಳಿದ: "ನನಗೆ ಹೆಂಡತಿಯಿಲ್ಲ. ನಿನಗೆ ಗಂಡನಿಲ್ಲ. ನೀನು ಹೆಣ್ಣು, ನಾನು ಗಂಡು ಇಷ್ಟು ಮಾತ್ರವೇ ಸತ್ಯ. ಉಳಿದುದು ಏನಿದೆಯೋ ಅದನ್ನು ಅಗ್ರಹಾರದವರು ನೋಡಲಿ, ಅದರಿಂದ ನಮಗೆ ಏನಾಗಬೇಕಾಗಿದೆ. ನಾನು ನಿನ್ನನ್ನು ಮುದ್ದಿಸಿದಾಗ ಜಾತಿ ಇತ್ತಾ? ದೇಹಗಳು ಹೇಳಿದವು. ಅವು ಯಾವುದನ್ನು ಕೇಳಿದವೋ ಅದನ್ನು ಕೊಟ್ಟೆವು. ಹೆಚ್ಚು ಮಾಡಿದರೆ ಅವರು ಜಾತಿಗೆ ಬಹಿಷ್ಕಾರ ಹಾಕಿಯಾರು. ನನಗೆ ಅವರ ಜಾತಿಯಿಂದ ಏನೂ ಆಗಬೇಕಾಗಿಲ್ಲ" ನಾರಣಪ್ಪ ಅವಳಿಗೆ ಎಲೆಯಡಿಕೆ ಕೊಟ್ಟ. ಅವಳ ಸುಂದರವಾದ ದೇಹವನ್ನು ಮತ್ತೊಮ್ಮೆ ನೋಡಿ, ಅವಳ ಅಂಗೈಯನ್ನು ಸವರಿ ಅದರ ಮೇಲೆ ತನ್ನ ಅಂಗೈಯನ್ನು ಇಟ್ಟ. ಇದು ಅವನಿಗೆ ಮತ್ತು ಚಂದ್ರಿಗೆ ಜೀವನದ ಅತ್ಯಂತ ಪರಮೋಚ್ಚವಾದ ಸ್ಥಿತಿಯೆಂದು ಅನಿಸಿತು. ಬಿಳಿ ಜಿರಳೆ ಲಲಿತೆ ಹೋದ ಮೇಲೆ ತನ್ನನ್ನು ಸಂಪೂರ್ಣವಾಗಿ ತೋಯಿಸಿದ